REPLY

(1/2)


namma metro

# ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ

(ಸಹಭಾಗಿತ್ವದ – ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಉದ್ಯಮ)

ಬಿ.ಎಂ.ಟಿ.ಸಿ. ಕಾಂಪ್ಲೆಕ್ಸ್, 3ನೇ ಮಹಡಿ, ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು – 560 027, ಭಾರತ

# Bangalore Metro Rail Corporation Ltd.

(A Joint Venture of Government of Karnataka & Government of India)

B.M.T.C Complex, 3rd Floor, K.H. Road, Shanthinagar, Bangalore - 560 027. INDIA.


ಸಂ: ಬಿಎಮ್‌ಆರ್‌ಸಿಎಲ್/ಸಿಇ/ಫೇಸ್–2/2013–14/149. ದಿನಾಂಕ: 23.07.2013

ಇವರಿಗೆ,

ಸಮನ್ವಯ ವೇದಿಕೆ(ರಿ) ಜಯನಗರ,
ಸಂ: 10, 37ನೇ ಕ್ರಾಸ್, 8ನೇ ಬ್ಲಾಕ್,
ಜಯನಗರ, ಬೆಂಗಳೂರು–560 082.

ಮಾನ್ಯರೇ,

ವಿಷಯ: ಜಯನಗರ ಆರ್.ವಿ.ರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರದ ವರೆಗೂ ಉದ್ದೇಶಿಸಲಾಗಿರುವ ಮೆಟ್ರೋ ರೈಲಿನ ಎರಡನೆಯ ಹಂತದ ಬಗ್ಗೆ.

ಉಲ್ಲೇಖ: ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಯವರ ಪತ್ರ ಸಂಖ್ಯೆ: ಮುಮಂ/ಆ.ಕಾ/322/2013, ದಿನಾಂಕ: 8.06.2013 ರೊಂದಿಗೆ ಲಗತ್ತಿಸಿದ ಸಮನ್ವಯ ವೇದಿಕೆಯ ಮನವಿ ದಿನಾಂಕ:10.06.2013.

************

1. ಜಯನಗರ ಆರ್.ವಿ.ರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರದ ವರೆಗೂ ಉದ್ದೇಶಿಸಲಾಗಿರುವ ಮೆಟ್ರೋ ರೈಲಿನ ಎರಡನೆಯ ಹಂತದ ಮಾರ್ಗ ಮತ್ತು ಆರ್.ವಿ.ರಸ್ತೆ ನಿಲ್ದಾಣ ಪಶ್ಚಿಮ ದಿಕ್ಕಿನ ಉದ್ಯಾನವನದಲ್ಲಿರುವುದರಿಂದ ಕಡಿತಗೊಳ್ಳುವ ಮರಗಳ ಸಂಖ್ಯೆ ಮತ್ತು ಉದ್ಯಾನವನದ ಮೇಲೆ ಪ್ರಭಾವ ಬೀರುವ ಉದ್ದವು ಪೂರ್ವ ದಿಕ್ಕಿನ ಉದ್ಯಾನವನದಲ್ಲಿ ನಿಯೋಜಿಸಿದ್ದ ಮಾರ್ಗಕ್ಕಿಂತ ಕಡಿಮೆಯಾಗುವುದು.

   ಉದ್ಯಾನವನದಲ್ಲಿರುವ ಮರಗಳನ್ನು ನಿಯೋಜಿತ ಮೆಟ್ರೋ ಕಾಮಗಾರಿಯ ಮೇಲ್ಸೇತುವೆ ಮತ್ತು ನಿಲ್ದಾಣ ಕಟ್ಟಡದ ಕಾಮಗಾರಿಗೆ ಮಾತ್ರ ಅನ್ವಯವಾಗುವಂತೆ ಕಡಿತ ಮಾಡಲಾಗುವುದು.

   ನಿಖರವಾಗಿ ಕಡಿತಗೊಳ್ಳುವ ಮರಗಳ ಸಂಖ್ಯೆಯನ್ನು ಅಡಿಪಾಯ ಮತ್ತು ಮೇಲು ಸೇತುವೆಯ ವಿನ್ಯಾಸದ ಕಾರ್ಯವನ್ನು ವಿನ್ಯಾಸಗೊಳಿಸಿದ ನಂತರ ಹೇಳಬಹುದಾಗಿದೆ. ಅಲ್ಲದೆ ಬಿಎಮ್‌ಆರ್‌ಸಿಎಲ್ ಸಂಸ್ಥೆಯು ಕಡಿತಗೊಳ್ಳುವ ಮರಗಳ ಸಂಖ್ಯೆಯ ಹತ್ತರಷ್ಟು ಸಸಿಗಳನ್ನು ನೆಡುವುದರ ಮೂಲಕ ಕಡಿತಗೊಳ್ಳುವ ಮರಗಳಿಂದ ಆಗುವ ಪರಿಸರ ನಾಶವನ್ನು ಸಮದೂಗಿಸಲು ಯೋಜನೆಯನ್ನು ಹಂತ–1 ರಂತೆ ಇದರಲ್ಲೂ ಕೂಡ ಆಯೋಜಿಸಲಾಗಿದೆ.

   ಮೆಟ್ರೋ ಯೋಜನೆಯು ರೂಪುಗೊಳ್ಳುವುದರಿಂದ ವಾಯು ಮಾಲಿನ್ಯವನ್ನು ನಿಯಂತ್ರಸಬಹುದಲ್ಲದೆ ರಸ್ತೆ ವಾಹನಗಳಿಂದ ಆಗಬಹುದಾದ ಇಂಗಾಲ ಹೊರಸೂಸುವಿಕೆಯ ಪ್ರಮಾಣವನ್ನು ಕಡಿಮೆಮಾಡಬಹುದು ಮತ್ತು ಹೆಚ್ಚಿನ ಪ್ರಮಾಣದ ರಸ್ತೆ ಸಾರಿಗೆ ಪ್ರಯಾಣಿಕರು ವಿದ್ಯುತ್ ಚಾಲಿತ ಮೆಟ್ರೋ ರೈಲ್ ಸೇವೆಗೆ ಬದಲಾಯಿಸಿಕೊಳ್ಳುವರು.

2. ತಾವು ದಿನಾಂಕ:19.11.2012 ರಂದು ಕಳುಹಿಸಲಾದ ಪತ್ರಕ್ಕೆ ದಿನಾಂಕ: 12.12.2012 ರಂದು ಪತ್ರದ ಮೂಲಕ ಉತ್ತರಿಸಲಾಗಿದೆ. ತದನಂತರ ನಿಮ್ಮ ಪತ್ರದ ದಿನಾಂಕ:18.12.2012 ಕ್ಕೆ ಪತ್ರ ದಿನಾಂಕ: 22.12.2012 ರಂದು ಉತ್ತರಿಸಲಾಗಿದೆ. ತಮಗೆ ತಿಳಿಯಪಡಿಸುವುದೇನೆಂದರೆ, ಯಾವುದೇ ಮಾಹಿತಿ ನೀಡುವಲ್ಲಿ ಮತ್ತು ಪ್ರಶ್ನೆಗೆ ಉತ್ತರಿಸುವಲ್ಲಿ ಯಾವುದೇ ವಿಳಂಬ ನೀತಿಯನ್ನು ಅನುಸರಿಸಿಲ್ಲ ಮತ್ತು ಸಕಾಲಕ್ಕೆ ಮಾಹಿತಿಯನ್ನು ನೀಡಲಾಗಿದೆ ಮತ್ತು ಉತ್ತರಿಸಲಾಗಿದೆ.

3. ಜಯನಗರ ಆರ್.ವಿ.ರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರದ ವರೆಗೂ ಉದ್ದೇಶಿಸಲಾಗಿರುವ ಮೆಟ್ರೋ ರೈಲಿನ ಎರಡನೆಯ ಹಂತದ ಮೂಲ ಮಾರ್ಗವು ಆರ್.ವಿ.ರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರದ ವರೆಗೆ ಇದೆ ಮತ್ತು ಪ್ರಸ್ತುತ ಮಾರ್ಗವು ಸಹ ಅದೇ ಪಥದಲ್ಲಿ ಸಾಗುತ್ತಿದ್ದು, ಮೂಲ ಮಾರ್ಗದಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ.

ನಿರ್ಮಾಣಗೊಳ್ಳುವ ಮಾರ್ಗವು ಅಂತಿಮಗೊಳ್ಳುವ ಮೊದಲು ತಿರುವುಗಳ ತ್ರಿಜ್ಯ, ಸ್ವಾಧೀನಗೊಳ್ಳುವ ಸ್ವತ್ತುಗಳ ಸಂಖ್ಯೆ, ಉದ್ಯಾನವನದ ಒಳಗೆ ಬರುವ ಮೆಟ್ರೋ ವಿನ್ಯಾಸದ ಉದ್ದ ಮತ್ತು ಕಡಿತಗೊಳ್ಳುವ ಮರಗಳ ಸಂಖ್ಯೆ ಮುಂತಾದುವುಗಳನ್ನು ಪರಿಗಣಿಸಬೇಕಾಗುತ್ತದೆ.

ಜಯನಗರ 5ನೇ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘವು ತಮ್ಮ ಭೂ ಸ್ವತ್ತಿನ ಸ್ವಾಧೀನವನ್ನು ನಿವಾರಿಸುವ ಸಲುವಾಗಿ ಹಲವಾರು ಆಯ್ಕೆಗಳನ್ನು ತಮ್ಮ ಮನವಿಯಲ್ಲಿ ತಿಳಿಸಿದ್ದರು. ಈ ಮನವಿಯನ್ನು ಕೂಲಂಕುಶವಾಗಿ ಪರಿಶೀಲಿಸಿ ಉತ್ತರಿಸಲಾಗಿದೆ ಮತ್ತು ಇದನ್ನು ಬಿಎಮ್ಆರ್‌ಸಿಎಲ್ ವೆಬ್‌ಸೈಟ್(www.bmrc.co.in)ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

ಜಯನಗರ 5ನೇ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಆಯ್ಕೆ ಸಂಖ್ಯೆ ನಾಲ್ಕು (proposal No-4) ಸಾಧ್ಯವಾಗುವಂತಹ (Feasible) ಆಯ್ಕೆ ಮತ್ತು ಆಯ್ಕೆಯನ್ನು ಇನ್ನು ನಿಯುಕ್ತಿಗೊಳ್ಳಲಿರುವ ವಿನ್ಯಾಸದ ಕಾರ್ಯವನ್ನು ಮಾಡುವ ಸಂಸ್ಥೆಯು (Detailed Design Consultant-DDC) ಕೂಲಂಕುಶವಾಗಿ ಪರಿಶೀಲಿಸುವುದು ಎಂದು ಉತ್ತರಿಸಲಾಗಿದೆ. DDC ಯು ತಾಂತ್ರಿಕ ಕಾಮಗಾರಿ, ಕಾರ್ಯನಿರ್ವಹಣೆ, ಪ್ರಯಾಣಿಕರ ಅನುಕೂಲತೆ ಮತ್ತು ನಿರ್ಮಾಣದ ವೆಚ್ಚವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸುತ್ತಾರೆ.

ಬಿಎಮ್ಆರ್‌ಸಿಎಲ್ ಸಂಸ್ಥೆಯು ಇತ್ತೀಚಗೆ DDC ಯನ್ನು ನಿಯುಕ್ತಿಗೊಳಿಸಿದೆ ಮತ್ತು ಅವರಿಂದ ಈ ಮೇಲೆ ತಿಳಿಸಿದ ಜಯನಗರ 5ನೇ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಆಯ್ಕೆ ಸಂಖ್ಯೆ ನಾಲ್ಕು (proposal No-4) ನ್ನು ಕೂಲಂಕುಶವಾಗಿ ಪರಿಶೀಲಿಸಲು ನಿರ್ದೇಶಿಸಲಾಗಿದೆ. DDC ಯು ಪರಿಶೀಲಿಸಿದ ನಂತರ ಮುಂದಿನ ಬೆಳವಣಿಗೆಯನ್ನು ಬಿಎಮ್ಆರ್‌ಸಿಎಲ್ ವೆಬ್‌ಸೈಟ್(www.bmrc.co.in)ನಲ್ಲಿ ಅಪ್‌ಲೋಡ್ ಮಾಡಲಾಗುವುದು.

ಆರ್.ವಿ.ರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರದ ವರೆಗಿನ ಎರಡನೆಯ ಹಂತದ ಮೆಟ್ರೋ ಕಾಮಗಾರಿಯ ಮಾರ್ಗವನ್ನು (ಜಯನಗರ 36ನೇ ಅಡ್ಡ ರಸ್ತೆ ಯಿಂದ 46ನೇ ಅಡ್ಡ ರಸ್ತೆ ವರೆಗೆ ಬಿಟ್ಟು) ಈಗಾಗಲೇ ಅಂತಿಮಗೊಳಿಸಲಾಗಿದೆ. ಜಯನಗರ 36ನೇ ಅಡ್ಡ ರಸ್ತೆ ಯಿಂದ 46ನೇ ಅಡ್ಡ ರಸ್ತೆ ವರೆಗಿನ ನಿಯೋಜಿತ ಮೆಟ್ರೋ ರೈಲಿನ ಕಾಮಗಾರಿಯ ಮಾರ್ಗವನ್ನು DDC ಯು ಪರಿಶೀಲಿಸಿ ವರದಿ ನೀಡಿದ ನಂತರ ಅಂತಿಮಗೊಳಿಸಲಾಗುವುದು.

4. ಪಶ್ಚಿಮ ದಿಕ್ಕಿನ ಉದ್ಯಾನವನದಲ್ಲಿ ನಿಯೋಜಿತ ಮೆಟ್ರೋ ಕಾಮಗಾರಿಯು ಮಾರ್ಗದ ಕಾರ್ಯವನ್ನು ಪ್ರಾರಂಭಿಸುವ ಮೊದಲು ಉದ್ಯಾನವನದಲ್ಲಿರುವ ನೀರು ಸರಬರಾಜು ಕೊಳವೆಗಳನ್ನು ಪತ್ತೆ ಮಾಡಲಾಗಿದ್ದು ಮತ್ತು ಕಾಮಗಾರಿಯ ಮಾರ್ಗವನ್ನು ನೀರು ಸರಬರಾಜು ಕೊಳವೆಯ ಹೊರಬದಿಯಲ್ಲಿ ಹಾಕಲಾಗಿದೆ.
ಈಗ ಇರುವ ಪಶ್ಚಿಮ ದಿಕ್ಕಿನ ಉದ್ಯಾನವನದಲ್ಲಿರುವ ನಿಯೋಜಿತ ಮೆಟ್ರೋ ಕಾಮಗಾರಿಯ ಮಾರ್ಗವು ನೀರು ಸರಬರಾಜು ಕೊಳವೆಯ ಮಾರ್ಗದಲ್ಲಿ ಬರುವುದಿಲ್ಲ.

ಇದು ತಮ್ಮ ಮಾಹಿತಿಗಾಗಿ,

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಮುಖ್ಯ ಇಂಜಿನೀಯರ್/ಫೇಸ್-2.

ಪ್ರತಿಯನ್ನು: ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿ, ಮುಖ್ಯಮಂತ್ರಿಯವರ ಸಚಿವಾಲಯ, ವಿಧಾನಸೌಧ, ಬೆಂಗಳೂರು.